**ದಿನಾಂಕಃ 14.08.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ ಪ್ರತಿವಾದಿಯವರ ಪರ ವಕೀಲರಾದ ಶ್ರೀ.ಸಿ ಎಸ್ ವಕೀಲರಿಂದಃ**

1. ನನ್ನ ತಾತನ ಹೆಸರು ವೆಂಕಟನಾಯಕ್. ನನ್ನ ತಾತನಿಗೆ 3 ಜನ ಮಕ್ಕಳು, ಅವರು ವೆಂಕಟನಾಯಕ್ ನನ್ನ ತಂದೆ, ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ಮತ್ತು ಹುಚ್ಚನಾಯಕ್. ನನ್ನ ತಂದೆ ವೆಂಕಟನಾಯಕ್ ರವರಿಗೆ ಮೊದಲ ಹೆಂಡತಿಯಿಂದ 4 ಜನ ಗಂಡು ಮಕ್ಕಳು, 3 ಜನ ಹೆಣ್ಣು ಮಕ್ಕಳು ಹಾಗೂ 2 ನೇ ಹೆಂಡತಿಯಿಂದ 4 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು. ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ರವರಿಗೆ ಮಕ್ಕಳಿಲ್ಲ. ಹುಚ್ಚನಾಯಕ್ ರವರಿಗೆ 3 ಜನ ಹೆಣ್ಣು ಮಕ್ಕಳು. ನನ್ನ ತಾತನ 2 ನೇ ಮಗ ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ಎಂದು ತೋರಿಸಲು ದಾಖಲಾತಿ ನ್ಯಾಯಾಲಯಕ್ಕೆ ನೀಡಿದ್ದೇನೆ. ಕುಳ್ಳಂಕನಾಯಕ್ ರವರಿಗೆ ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ಎಂದು ಕರೆಯುತ್ತಿರಲಿಲ್ಲ, ಕೇವಲ ಕುಳ್ಳಂಕನಾಯಕ್ ಎಂದು ಕರೆಯುತ್ತಿದ್ದರು ಎಂದರೆ ಸುಳ್ಳು. ದಾವಾ ಸರ್ವೇ ನಂ. 77/1 ರಲ್ಲಿ ನನ್ನ ಚಿಕ್ಕಪ್ಪ ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ರವರು 2 ಏಕರೆ 24 ಗುಂಟೆ ಜಮೀನನ್ನು ಚೊಕ್ಕೆಗೌಡನಹಳ್ಳಿ , ದಾಸೇಗೌಡರಿಂದ ಖರೀದಿ ಮಾಡಲಾಗಿದೆ. ಸದರಿ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರುಮಾಡಿದ್ದೇನೆ. ನನ್ನ ತಾತ ವೆಂಕಟನಾಯಕ್ ರವರ 3 ನೇ ಮಗ ಹುಚ್ಚನಾಯಕ್ ಮೇಲೆ ಹೇಳಿದ ಸರ್ವೇ ನಂ. 77/1 ರಲ್ಲಿ 2 ಏಕರೆ 24 ಗುಂಟೆ ಜಮೀನನ್ನು ದಿಃ06.12.1977 ರಲ್ಲಿ ಚೊಕ್ಕೆಗೌಡನಹಳ್ಳಿ, ದಾಸೇಗೌಡರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ಖರೀದಿ ಮಾಡಿದ ದಿನದಿಂದಲೂ ಸದರಿ ಜಮೀನಿಗೆ ಸಂಬಂಧಿಸಿದ ಪಹಣಿ ಪತ್ರದಲ್ಲಿ ಮಾಲೀಕನ ಹೆಸರು ಹುಚ್ಚನಾಯಕ್ ಎಂದೆ

ಬರುತ್ತಿದೆ ಎಂದರೆ ಸರಿಯಲ್ಲ, ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ಎಂದು ಬರುತ್ತಿದೆ. ಆ ರೀತಿ ಹೆಸರು ನಮೂದು ಆಗಿರುವ ಪಹಣಿ ಪತ್ರವನ್ನು ನ್ಯಾಯಾಲಯಕ್ಕೆ ನೀಡಿದ್ದೇನೆ. ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ರವರು ಸುಮಾರು 7-8 ವರ್ಷಗಳ ಹಿಂದೆ ಮರಣ ಹೊಂದಿದ್ದಾರೆ ಅಂದರೆ ನಮಗೆ ವಿಲ್ ಬರೆದ 3 ವರ್ಷದ ನಂತರ ಮರಣ ಹೊಂದಿದ್ದಾರೆ. ನನ್ನ ತಾತನ 3 ನೇ ಮಗ ಹುಚ್ಚನಾಯಕ್ (1 ನೇ ಎದುರುದಾರರ ಗಂಡ) ರವರು ಸುಮಾರು 10 ವರ್ಷಗಳ ಹಿಂದೆಯೇ ಮರಣ ಹೊಂದಿದ್ದಾರೆ. ನನ್ನ ತಾತ ಬದುಕಿದ್ದಾಗಲೇ, ಅವರ ಮಕ್ಕಳು ಆಸ್ತಿಯನ್ನು ಭಾಗ ಮಾಡಿಕೊಂಡಿದ್ದರು ಎಂದರೆ ಸುಳ್ಳು. ಖರೀದಿ ಮಾಡಿದ 2 ಏಕರೆ 24 ಗುಂಟೆ ಜಮೀನನ್ನು 3 ಜನ ಸಹೋದರರು ಒಟ್ಟು ಕುಟುಂಬದಲ್ಲಿದ್ದಾಗಲೇ ವಿಭಾಗ ಮಾಡಿಕೊಂಡಿದ್ದು, ಎಮ್ ಆರ್ ಸಂಖ್ಯೆ 11/95-96 ರಂತೆ 1 ಮತ್ತು 2 ನೇ ಮಕ್ಕಳಿಗೆ ತಲಾ 34 ಗುಂಟೆಯಂತೆ 3 ನೇ ಮಗನಿಗೆ 36 ಗುಂಟೆ ಜಮೀನು ಹಂಚಿಕೊಂಡಿರುತ್ತಾರೆ ಎಂದರೆ ಸುಳ್ಳು. ಅದೇ ಪ್ರಕಾರ ಪಹಣಿ ಪತ್ರದಲ್ಲಿ ಕೂಡ ಅವರವರ ಹೆಸರು ಬರುತ್ತಿದೆ ಎಂದರೆ ಸುಳ್ಳು. ಆ ರೀತಿ ಭಾಗಕ್ಕೆ ಬಂದ ಜಮೀನಿನಲ್ಲಿ 2 ನೇ ಮಗ ಕುಳ್ಳಂಕನಾಯಕ್ ತಮ್ಮ ಭಾಗದ 34 ಗುಂಟೆ ಜಮೀನಿನಲ್ಲಿ 29 ಗುಂಟೆ ಜಮೀನನ್ನು ಸಣ್ಣಮುದ್ದಮ್ಮ ಕೋಂ ಬಸವನಾಯಕ್ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ, 2 ನೇ ಮಗ ಮಾರಾಟ ಮಾಡಿದ್ದಾರೆ. ಆ ಕುರಿತು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಮೇಲೆ ಹೇಳಿದಂತೆ ಮಾರಾಟ ಆದ ನಂತರ ನಿಪಿ. 3 ರಲ್ಲಿ ಸಣ್ಣಮುದ್ದಮ್ಮನಿಗೆ 29 ಗುಂಟೆ ಹುಚ್ಚನಾಯಕ್ ನಿಗೆ 5 ಗುಂಟೆ ಬಂದಿದೆ ಎಂದು ಇದೆ ಎಂದರೆ ನಿಜ. ಅದೇ ಪ್ರಕಾರ 3 ನೇ ಮಗ ಹುಚ್ಚನಾಯಕ್ ಅಂದರೆ 1 ನೇ ಎದುರುದಾರರ ಗಂಡನ ಹೆಸರಿನಲ್ಲಿ 36 ಗುಂಟೆ ಜಮೀನು ಇದೆ ಎಂದು ನಿಪಿ. 3 ರಲ್ಲಿ ತೋರಿಸಿದೆ ಎಂದರೆ ಸುಳ್ಳು. ಹಾಗೇಯೇ ಚಿಕ್ಕನಾಯಕ್ ಅಂದರೇ ನನ್ನ ಅಣ್ಣನಿಗೆ (ನನ್ನ ತಂದೆಯ 2 ನೇ

ಹೆಂಡತಿಯ ಮಗ) 29 ಗುಂಟೆ ಜಮೀನು ಬಂದಿದೆ ಎಂದರೆ ನಿಜ. ಸದರಿ 29 ಗುಂಟೆ ಜಮೀನನ್ನು ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ರವರು ನೀಡಿದ್ದಾರೆ. ಹಾಗೇಯೇ ನಿಪಿ. 3 ರಲ್ಲಿರುವ 5 ಗುಂಟೆ ಜಮೀನನ್ನು ಕೂಡ ಚಿಕ್ಕನಾಯಕನಿಗೆ ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ರವರೇ ನೀಡಿದ್ದಾರೆ. ಸದರಿ 29 ಮತ್ತು 5 ಗುಂಟೆ ಜಮೀನು ನನ್ನ ತಂದೆ ವೆಂಕಟನಾಯಕ್ ರವರಿಗೆ ಸೇರಿದ ಜಮೀನು ಆಗಿದೆ ಎಂದರೆ ಸುಳ್ಳು. ಅದಾದನಂತರ 34 ಗಂಟೆ ಜಮೀನು ಕುಳ್ಳಂಕನಾಯಕ್ ರವರ ಹೆಸರಿಗೆ ಬರುತ್ತಿತ್ತು ಎಂದರೆ ಸರಿಯಲ್ಲ, ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ರವರ ಹೆಸರಿಗೆ ಬರುತ್ತಿತ್ತು. ವಿಲ್ ಬರೆದ ಸಂದರ್ಭದಲ್ಲಿ ಅಂದರೆ ದಿಃ19.01.2006 ರಂದು ದಾವಾ ಸ್ವತ್ತು ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ರವರ ಹೆಸರಿನಲ್ಲಿ ಇತ್ತು. ನಾನು ಹೇಳಿದಂತೆ ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ರವರ ಹೆಸರಿನಲ್ಲಿ ದಾವಾ ಸ್ವತ್ತು ದಿಃ19.01.2006 ರಂದು ಇರಲಿಲ್ಲ, ಸದರಿ ಸ್ವತ್ತು 1 ನೇ ಎದುರುದಾರರ ಗಂಡ ಹುಚ್ಚನಾಯಕ್ ರವರ ಹೆಸರಿನಲ್ಲಿ ಇತ್ತು ಎಂದರೆ ಸುಳ್ಳು. ನಾನು ಮತ್ತು ಕುಳ್ಳಂಕನಾಯಕ್ ಸೇರಿ ದಿಃ19.01.2006 ರ ವಿಲ್ ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ವಿಲ್ ಆಯಿತು ಎಂದು ಹೇಳಿದ ನಂತರ ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ರವರು ಮರಣ ಹೊಂದಿದ ನಂತರ ಸ್ವತ್ತಿನ ಖಾತಾ ನಮ್ಮ ಹೆಸರಿಗೆ ಬರಲು ತಾಲೂಕು ಕಚೇರಿಗೆ ಅರ್ಜಿ ನೀಡಿರುವುದು ನಿಜ. 1 ನೇ ಎದುರುದಾರವರು ಕೂಡ ಹುಚ್ಚನಾಯಕ್ ರವರ ಹೆಸರಿನಲ್ಲಿರುವ ಜಮೀನನ್ನು ಅವರ ಹೆಸರಿಗೆ ಮಾಡಬೇಕೆಂದು ತಹಶಿಲ್ದಾರ್ ರವರಿಗೆ ಅರ್ಜಿ ಕೊಟ್ಟಿದ್ದಾರೆ ಎಂದರೆ ಸುಳ್ಳು. ನಾನು ನೀಡಿದ ಅರ್ಜಿಗೆ 1 ನೇ ಎದುರುದಾರರು ತಕರಾರು ಸಲ್ಲಿಸಿದ್ದರು, ಸಾಕ್ಷಿ ಮುಂದುವರೆದು ಹೇಳುತ್ತಾರೆ ಸದರಿ ತಕರಾರನ್ನು ತಿರಸ್ಕರಿಸಲಾಗಿರುತ್ತದೆ. ತಕರಾರನ್ನು ಪಡೆದು ಆರ್ ಆರ್ ಟಿ ವಿವಾದ ಸಿ ಆರ್ ನಂ. 213/2021 ನ್ನು

ದಾಖಲಿಸಿಕೊಂಡು ವಿಚಾರಣೆ ಮಾಡಿದ್ದಾರೆ ಎಂದರೆ ನಿಜ. ಈ ರೀತಿ ನಾನು ಅರ್ಜಿ ಕೊಟ್ಟು ಖಾತಾ ಬದಲಾವಣೆಗೆ ಕೇಳುವ ಪೂರ್ವದಲ್ಲಿ 66/2018-2019 ರಲ್ಲಿ ಖಾತೆ ಬದಲಾವಣೆ ಕುರಿತು ಅರ್ಜಿ ಇತ್ಯರ್ಥ ಆಗಿರುತ್ತದೆ ಎಂದರೆ, 1 ನೇ ಎದರುದಾರರು ಸಲ್ಲಿಸಿದ ಅರ್ಜಿ ಆಗಿದ್ದು ಅದು ವಜಾ ಆಗಿರುತ್ತದೆ. ಆರ್ ಆರ್ ಟಿ ವಿವಾದ ಸಿ ಆರ್ ನಂ. 213/2021 ರಲ್ಲಿ ಸಿವಿಲ್ ನ್ಯಾಯಾಲಯದಿಂದ ಆದೇಶ ಪಡೆದುಕೊಂಡು ಬರಬೇಕೆಂದು ಹೇಳಿರುತ್ತಾರೆ ಎಂದರೆ ನಿಜ. ಅದೇ ಪ್ರಕಾರ ಸದರಿ ಆದೇಶದಲ್ಲಿ ಪಹಣಿಯಲ್ಲಿದ್ದ ನಮೂದುಗಳನ್ನು ಯಥಾ ಸ್ಥಿತಿಯಲ್ಲಿಟ್ಟು ವಿಲ್ ಮೇಲೆ ನೀಡಿದ ಖಾತಾ ಬದಲಾವಣೆಗೆ ನೀಡಿದ ಅರ್ಜಿಯನ್ನು ವಜಾ ಗೊಳಿಸಲಾಗಿತ್ತು ಎಂದರೆ ಸುಳ್ಳು. ಆ ನಂತರ ಸದರಿ ಆದೇಶದ ಮೇಲೆ ಸಿವಿಲ್ ನ್ಯಾಯಾಲಯಕ್ಕೆ ಯಾವುದೇ ಕೇಸ್ ಹಾಕಿಲ್ಲ. ಸಾಕ್ಷಿ ಮುಂದುವರೆದು ಹೇಳುತ್ತಾರೆ ಹುಣಸೂರು ಎಸಿ ನ್ಯಾಯಾಲಯದಲ್ಲಿ ಖಾತಾ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು, ಅದು ನನ್ನ ಪರ ಆಗಿರುತ್ತದೆ. ಸದರಿ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಡುತ್ತೇನೆ. ದಾವಾ ಸರ್ವೇ ನಂಬರ್ ನ ಪೂರ್ತಿ ಜಮೀನಿಗೆ ಸಂಬಂಧಿಸಿದಂತೆ ಹುಣಸೂರು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಕುಳ್ಳಂಕನಾಯಕ್ ರವರು 1 ನೇ ಎದುರುದಾರರ ಮತ್ತು ಅವರ ಗಂಡ ಹುಚ್ಚನಾಯಕ್ ರವರ ಮೇಲೆ ದಾವಾ ಸಂಖ್ಯೆ193/1997 ನ್ನು ಸಲ್ಲಿಸಿದ್ದರು ಎಂದರೆ, ಹುಚ್ಚನಾಯಕ್ ಅಲಿಯಾಸ್ ಕುಳ್ಳಂಕನಾಯಕ್ ರವರು ಸಲ್ಲಿಸಿದ್ದರು, ದಾವೆ ನನ್ನ ಪರ ಆಗಿರುತ್ತದೆ. ದಾವಾ ಸರ್ವೇ ನಂಬರ್ ನ ಮೇಲೆ ಆರ್ ಎಸ್ ಎ 1421/2010 ರಲ್ಲಿ ಗೌ. ಉಚ್ಚ ನ್ಯಾಯಾಲಯದಲ್ಲಿ ದಾವೆ ಈಗಲೂ ಬಾಕಿ ಇದೆ ಎಂದರೆ, ಈ ದಾವೆಯಲ್ಲಿರುವ ಸ್ವತ್ತಿಗೆ ಸಂಬಂಧಿಸಿದಂತೆ ಇರುವುದಿಲ್ಲ. ನನ್ನ ದಾವೆ ಶೆಡ್ಯೂಲ್ ನಲ್ಲಿ ದಾವಾ ಸರ್ವೇ ನಂ. 77/1 ರಲ್ಲಿ 4 ಏಕರೆ 24 ಗುಂಟೆ ಜಮೀನಿನ ಪೈಕಿ 36 ಗುಂಟೆ ಜಮೀನಿಗೆ ಮಾತ್ರ ಪರಿಹಾರ ಕೇಳಿದ್ದೇನೆ ಎಂದರೆ ಅದು ತಪ್ಪು. ಕುಳ್ಳಂಕನಾಯಕ್ ರವರು ಮರಣ ಹೊಂದಿದ ನಂತರ ಅವರಿಗೆ ಮಕ್ಕಳು

ಇಲ್ಲದೇ ಇರುವುದರಿಂದ ಅವರ ಸಹೋದರರು ಮತ್ತು ಸಹೋದರರ ಮಕ್ಕಳು ಕುಳ್ಳಂಕನಾಯಕ್ ನ ವಾರಸ್ಸುದಾರರು ಎಂದರೆ, ನಾವೇ ಅವರ ವಾರಸ್ಸುದಾರರು. ಕುಳ್ಳಂಕನಾಯಕ್ ಯಾವುದೇ ಮರಣಶಾಸನವನ್ನು ನಮ್ಮ ಪರ ಬರೆದಿಲ್ಲ ಎಂದರೆ ಸುಳ್ಳು. ಈ ದಾವಾ ಸ್ವತ್ತು ಎದುರುದಾರರಿಗೆ ಸೇರಿದ ಸ್ವತ್ತಾಗಿದೆ ಆ ಕುರಿತು ವಿಲ್ ಬರೆಯಲು ಕುಳ್ಳಂಕನಾಯಕ್ ರವರಿಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯಿಂದ ನಮಗೆ ಪಿತ್ರಾರ್ಜಿತ ಆಸ್ತಿ ಬಂದಿದೆಯೋ ಎಂದರೆ, ಪಿತ್ರಾರ್ಜಿತ ಆಸ್ತಿ ಬಂದಿರುವುದಿಲ್ಲ ಆದರೆ ಸ್ವಂತ ಆಸ್ತಿ ಬಂದಿರುತ್ತದೆ. ವಿಲ್ ನ್ನು ಸೃಷ್ಟಿ ಮಾಡಿರುವುದರಿಂದ ಚೆಕ್ ಬಂದಿಯನ್ನು ಸುಳ್ಳಾಗಿ ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ಸ್ವತ್ತಿನ ಚೆಕ್ ಬಂದಿ ಸರಿ ಇದೆ ಎಂದು ತೋರಿಸಲು ದಾಖಲಾತಿ ಇದೆ. ಈ ಅರ್ಜಿ ಸಲ್ಲಿಸಲು ನನಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಅಕ್ರಮ ಲಾಭ ಪಡೆದುಕೊಳ್ಳುವ ಉದ್ದೇಶದಿಂದ ಸಲ್ಲಿಸಿದ್ದೇನೆ ಎಂದರೆ ಸುಳ್ಳು. ದಿಃ19.01.2006 ರಂದೆ ದಾಸನಪುರ ಗ್ರಾಮದ ಸರ್ವೇ ನಂ. 2/28 ಕ್ಕೆ ಸಂಬಂಧಿಸಿದಂತೆ ಇನ್ನೊಂದು ವಿಲ್ ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸುಳ್ಳು. ಎದುರುದಾರಿಗೆ ಹೆಣ್ಣು ಮಕ್ಕಳೇ ಇರುವುದರಿಂದ ಆಸ್ತಿಯನ್ನು ಲಪಟಾಯಿಸಲು ಈ ರೀತಿ ವಿಲ್ ಗಳನ್ನು ಸೃಷ್ಟಿಸಿ ಅರ್ಜಿ ಸಲ್ಲಿಸಲಾಗಿದೆ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

(ಉಷಾರಾಣಿ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.